ದಿನಾಂಕಃ 23-09-2021 ಓ ಎಸ್ ನಂ. 88/2014 (ಡಿ.ಡಬ್ಲ್ಯೂ 2)

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಆರ್ ವಿ ಜೆ ವಕೀಲರಿಂದಃ ಪ್ರತಿವಾದಿಯರ ಪರಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಸಾಕ್ಷಿ ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯ ನಿಜವಿರುತ್ತದೆ. ನಾನು ನನ್ನ ಸಾಕ್ಷಿ ಪ್ರಮಾಣ ಪತ್ರ ಓದಿಸಿ ತಿಳಿದುಕೊಂಡು ಸಹಿ ಮಾಡಿದ್ದು ಅದರಲ್ಲಿ ಕಂಡು ಬರುವ ಸಹಿ ನನ್ನದೇ ಆಗಿರುತ್ತದೆ. ಈಗಾಗಲೇ ನನ್ನ ತಂದೆ ಈ ದಾವೆಯಲ್ಲಿ ತನ್ನ ಸಾಕ್ಷಿ ಪ್ರಮಾಣದ ಪತ್ರ ಸಲ್ಲಿಸಿ ನಾವು ಹಾಜರು ಪಡಿಸಿರುವ ದಾಖಲೆಗಳನ್ನು ನಿಡಿ 1 ರಿಂದ 34 ಅಂತಾ ಗುರುತಿಸಿದ್ದು, ನನ್ನ ತಂದೆಯ ಸಾಕ್ಷಿ ಮುಂದುವರೆದ ಪಾಟೀ ಸವಾಲಿಗೆ ನಿಗದಿಪಡಿಸಿದಾಗ ನನ್ನ ತಂದೆ ಮೃತಪಟ್ಟಿದ್ದು ನಾನು ಈ ಕೇಸಿನಲ್ಲಿ ಡಿ ಡಬ್ಲ್ಯೂ -2 ಅಂತಾ ಸಾಕ್ಷಿ ಹೇಳುತ್ತಿದ್ದೇನೆ. ನಾನು ಈ ಕೇಸಿಗೆ ಸಂಬಂಧಿಸಿದಂತೆ ಸರ್ವೆ ನಂ. 18/7, 180/1+2+3/ ಬ ಇವುಗಳ 3 ಪಹಣಿ ಹಾಜರು ಮಾಡಿದ್ದೇನೆ ಅವುಗಳನ್ನು ಕ್ರಮವಾಗಿ ನಿಡಿ -35,36,37 ಅಂತಾ ಗುರುತಿಸಲಾಯಿತು. ದಿಃ 30.04.2018 ರ ಕ್ರಯ ಪತ್ರದ ದೃಢೀಕೃತ ಪ್ರತಿ ಹಾಜರು ಮಾಡಿದ್ದೇನೆ ಅದನ್ನು ನಿಡಿ -38 ಅಂತಾ ಗುರುತಿಸಲಾಯಿತು. ದಿಃ 13.02.2019 ರ ಒಂದು ಕ್ರಯದ ಕರಾರು ಪತ್ರದ ದೃಢೀಕೃತ ಪ್ರತಿ ಹಾಜರು ಮಾಡಿದ್ದೇನೆ ಅದನ್ನು ನಿಡಿ 39 ಅಂತಾ ಗುರುತಿಸಲಾಯಿತು.

**ಪಾಟೀ ಸವಾಲುಃ** ವಕೀಲರ ವಿನಂತಿ ಮೇರೆಗೆ ಮುಂದೂಡಲಾಗಿದೆ.

(ಮುಂದುವರೆದ ಮುಖ್ಯ ವಿಚಾರಣೆ ವಕೀಲರ ವಿನಂತಿ ಮೇರೆಗೆ ಮುಂದೂಡಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು, ಹುಕ್ಕೇರಿ
ಸಂಚಾರಿ ನ್ಯಾಯಾಲಯ ಸಂಕೇಶ್ವರ